ಅಪರ ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾ ಯಿಕ
ದಂಡಾಧಿಕಾರಿಗಳವರ ನ್ಯಾಯಾಲಯ, ಹುಣಸೂರು.

**ಸಿ.ಸಿ. ಸಂಖ್ಯೆಃ 2426/2022**

ಫಿರ್ಯಾದುದಾರರು : ಮಹೇಶ್ ಸಿ.
ಬಿನ್ ಚಿಕ್ಕಣ್ಣ,
ವಯಸ್ಸು ಸುಮಾರು 36 ವರ್ಷ,
ಮನೆ ಸಂಃ 16/ಎ, ರಾಜಪ್ಪ ನಿಲಯ,
ಕಲ್ಯಾಣ ಮಂಟಪ ರಸ್ತೆ,
ಎ.ಕೆ. ಕಾಲೋನಿ, ಕೇತಮಾರನಹಳ್ಳಿ,
ಮೈಸೂರು - 570019.

ವಿರುದ್ಧ,

ಆರೋಪಿ/ಗಳು : ಮಹೇಶ್ ಬಿ.ಎಸ್.
ಬಿನ್ ಶಿವಣ್ಣ ನಾಯಕ,
ವಯಸ್ಸು ಸುಮಾರು 36 ವರ್ಷ,
ವಾಸಃ ಉದ್ದೂರು ಗ್ರಾಮ ಮತ್ತು ಅಂಚೆ,
ಹುಣಸೂರು ತಾಲ್ಲೂಕು,
ಮೈಸೂರು.

ಕೆಲಸದ ಜಾಗಃ

ಬಸ್ ನಿರ್ವಾಹಕರು,
ಬ್ಯಾಡ್ಜ್ ಸಂಃ 1085/2792
ಹೆಚ್.ಡಿ. ಕೋಟೆ ಬಸ್ ಡಿಪೋ
ಹೆಚ್.ಡಿ. ಕೋಟೆ ತಾಲ್ಲೂಕು,
ಮೈಸೂರು ಜಿಲ್ಲೆ.

## ಆಪಾದನೆ

ಆರೋಪಿಯಾದ ನೀವು ಜೂನ್ 2021 ನೇ ಎರಡನೇ ವಾರದಂದು ರಂದು ಫಿರ್ಯಾದುದಾರರಿಂದ ನಿಮ್ಮ ಕಾನೂನು ಬದ್ದ ಅವಶ್ಯಕತೆಗಾಗಿ ರೂ.2,50,000/- ಹಣವನ್ನು ಸಾಲವಾಗಿ ಪಡೆದು, ಸದರಿ ಸಾಲದ ಹಣವನ್ನು ಮರುಪಾವತಿಸಲು 29-12-2021 ರ ದಿನಾಂಕ ಇರುವ ರೂ.2,50,000/- ದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಸಿಲ್ವರ್ ಜುಬಿಲಿ ಶಾಖೆ, ಹುಣಸೂರು ಇಲ್ಲಿಗೆ ಸೇರಿದ ಚೆಕ್ ಸಂಖ್ಯೆ - 257948 ಅನ್ನು ಫಿರ್ಯಾದುದಾರರು ತಮ್ಮ ಬ್ಯಾಂಕ್ ಖಾತೆ ಇರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಚಲ್ಲಹಳ್ಳಿ ಶಾಖೆ, ಬಿಳಿಕೆರೆ ಹೋಬಳಿ, ಹುಣಸೂರು ತಾಲ್ಲೂಕು ಇಲ್ಲಿಗೆ ನಗಧೀಕರಣಕ್ಕಾಗಿ ಹಾಜರುಪಡಿಸಿದಾಗ, ಸದರಿ ಚೆಕ್ಕು **"Funds Insufficient"** ಎಂಬ

ಹಿಂಬರಹದೊಂದಿಗೆ ದಿಃ 30.12.2021 ರಂದು ವಾಪಾಸಾಗಿರುತ್ತದೆ. ಆದ್ದರಿಂದ ಫಿರ್ಯಾದುದಾರರು ತಮ್ಮ ವಕೀಲರ ಮುಖಾಂತರ ದಿಃ 07.01.2022 ರಂದು ನೊಂದಾಯಿತ ಅಂಚೆ ಮೂಲಕ ನೊಟೀಸನ್ನು ಕಳುಹಿಸಿದ್ದು, ಸದರಿ ನೋಟೀಸ್ ನಿಮಗೆ ದಿಃ10.01.2022 ರಂದು ಜಾರಿಯಾಗಿದ್ದರೂ ಸಹ ನೀವು ಇದುವರೆವಿಗೂ ಫಿರ್ಯಾದುದಾರರಿಗೆ ಚೆಕ್ಕಿನಲ್ಲಿ ನಮೂದಿಸಿದ ಹಣವನ್ನಾಗಲೀ ಅಥವಾ ಸದರಿ ನೋಟೀಸಿಗೆ ಪ್ರತ್ಯುತ್ತರವನ್ನಾಗಲೀ ನೀಡಿರುವುದಿಲ್ಲ. ಆದಕಾರಣ ನೀವು ಎನ್.ಐ ಆ್ಯಕ್ಟ್ ಕಲಂ **138** ರಂತೆ ಶಿಕ್ಷಾರ್ಹ ಅಪರಾಧ ಎಸಗಿದ್ದೀರಿ ಎಂದು ನಿಮ್ಮ ಮೇಲೆ ಆಪಾದನೆ ಮಾಡಲಾಗಿದೆ.

ಮೇಲ್ಕಂಡ ಅಪರಾದವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುವುದರಿಂದ, ನೀವು ಈ ನ್ಯಾಯಾಲಯದ ವಿಚಾರಣೆಗೆ ಒಳಪಡುತ್ತೀರಿ.

ಪ್ರಶ್ನೆ **1.** ಇದೀಗ ಓದಿ ವಿವರಿಸಿದ ಆಪಾದನೆ ನಿಮಗೆ ಅರ್ಥವಾಯಿತೆ**?**

ಉತ್ತರಃ

ಪ್ರಶ್ನೆ **2.** ಈ ಆಪಾದನೆಯ ಬಗ್ಗೆ ನೀವು ತಪ್ಪನ್ನು ಒಪ್ಪಿಕೊಳ್ಳುತ್ತೀರಾ ಅಥವಾ
ಯಾವುದಾದರೂ ಪ್ರತಿ ರಕ್ಷಣೆ ಇದೆಯೇ**?**

ಉತ್ತರಃ

ದಿಃ **02.03.2024**

(ಪೂಜಾ ಬೆಳಕೇರಿ )
ಅಪರ ಸಿವಿಲ್ ನ್ಯಾಯಾಧೀಶರು ಹಾಗೂ
ದಂಢಾಧಿಕಾರಿಗಳು, ಹುಣಸೂರು.